**ದಿನಾಂಕಃ 18-06-2019 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಹೆಚ್ ಎ ಎಸ್ ವಕೀಲರಿಂದಃ**

ನಾನು ಕಳೆದ 3 ವರ್ಷಗಳಿಂದ ಅಕೌಂಟ್ಸ್ ಮ್ಯಾನೇಜರ್ ಆಗಿ ಫಿರ್ಯಾದುದಾರ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದೇನೆ. ಈ ಪ್ರಕರಣವನ್ನು ನಡೆಸಲು ಸಂಸ್ಥೆಯಿಂದ ನನಗೆ ಅಧಿಕಾರ ಪತ್ರ ಕೊಟ್ಟಿದ್ದಾರೆ . ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಸಾಕ್ಷಿ ಮುಂದುವರಿದು ಸದರಿ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದು ನುಡಿಯುತ್ತಾರೆ. ಯಾವ ದಿನಾಂಕದಂದು ಅಧಿಕಾರ ಪತ್ರ ಕೊಟ್ಟಿದ್ದಾರೆ ಎಂದರೆ ನೆನಪಿಲ್ಲ. ಸುಮಾರು 22 ಪ್ರಕರಣಗಳನ್ನು ನಡೆಸಲು ಅಧಿಕಾರ ಪತ್ರ ಕೊಟ್ಟಿದ್ದಾರೆ. ನಾನು ಅಧಿಕಾರಕ್ಕೆ ಬಂದ ಪೂರ್ವದಲ್ಲಿ ದಾಖಲಿಸಿದ ಮತ್ತು ನಂತರದಲ್ಲಿ ದಾಖಲಿಸಿದ ಪ್ರಕರಣಗಳ ಬಗ್ಗೆಯೂ ಅಧಿಕಾರ ಪತ್ರ ಕೊಟ್ಟಿದ್ದಾರೆ. ಈ ಪ್ರಕರಣಕ್ಕೆ ಸಂಬಂಧಿಸಿದ ವ್ಯವಹಾರವು 2014 ರಲ್ಲಿ ಪ್ರಾರಂಭವಾಗಿದೆ. ಈ ಪ್ರಕರಣದ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇದೆ.

ಪ್ರಕರಣ ದಾಖಲಿಸುವ ಪೂರ್ವದಲ್ಲಿ ನೀಡಿದ ನೋಟೀಸಿಗೆ ನಾನೇ ಮಾಹಿತಿ ಕೊಟ್ಟಿದ್ದೇನೆ. ಫಿರ್ಯಾದುದಾರ ಸಂಸ್ಥೆಯವರು ಅಧಿಕಾರ ಪತ್ರ ಕೊಟ್ಟಿದ್ದು , ಅದರ ಆಧಾರದ ಮೇಲೆ ನೋಟೀಸು ಕೊಡುತ್ತಿದ್ದೇನೆ ಎಂದು ನೋಟೀಸಿನಲ್ಲಿ ಹೇಳಿದ್ದೀರಾ ಎಂದರೆ ಹೇಳಿದ್ದೇನೆ. ನಮ್ಮ ಸಂಸ್ಥೆಯು ಕೃಷಿಗೆ ಸಂಬಂಧಿಸಿದ ವಸ್ತುಗಳನ್ನು ತಯಾರಿಸಿ ಮಾರಾಟ ಮಾಡುವ ವ್ಯವಹಾರ ಮಾಡುತ್ತದೆ. ನಾವು ಡೀಲರ್ ಶಿಪ್ ಮೂಲಕ ನಮ್ಮ ವಸ್ತುಗಳನ್ನು ಮಾರಾಟ ಮಾಡುತ್ತೇವೆ. ಡೀಲರ್ ಶಿಪ್ ಮಾಡುವಾಗ ಒಪ್ಪಂದ ಮಾಡಿಕೊಳ್ಳುತ್ತೀರಾ ಎಂದರೆ ಮಾಡಿಕೊಳ್ಳುತ್ತೇವೆ. ಸದರಿ ಒಪ್ಪಂದಕ್ಕೆ ನಮ್ಮ ಸಂಸ್ಥೆಯ ಮಾಲೀಕರು ಸಹಿ ಹಾಕುತ್ತಾರೆ. ನನಗೆ ಅಧಿಕಾರ ಪತ್ರ ಕೊಟ್ಟಿರುವ 22 ಪ್ರಕರಣಗಳಲ್ಲಿಯೂ ಸಹ ಡೀಲರ್ ಗಳ ಜೊತೆ ಒಪ್ಪಂದ ಪತ್ರ ಮಾಡಿಕೊಳ್ಳಲಾಗಿದೆ. ನಮ್ಮ ಸಂಸ್ಥೆಯ ಯಾವುದೇ ವ್ಯವಹಾರವನ್ನು ಬ್ಯಾಂಕ್ ಮೂಲಕ ಮಾಡಬೇಕು ಎಂದರೆ ಸರಿ . ನಮ್ಮ ಸಂಸ್ಥೆಗೆ ಯಾರಾದರೂ ಹಣ ಬಾಕಿ ಇದ್ದರೆ ಸಂಸ್ಥೆಯ ಖಾತೆಗೆ ಜಮಾ ಮಾಡಲಾಗುತ್ತದೆ ಎಂದರೆ ಸರಿ. ಎಲ್ಲಾ ಡೀಲರ್ ಶಿಪ್ ಪಡೆದಿರುವ ವ್ಯಕ್ತಿಗಳ ಪ್ರತ್ಯೇಕ ಅಕೌಂಟ್ಸ್ ಇಟ್ಟುಕೊಳ್ಳುತ್ತೇವೆ ಎಂದರೆ ಸರಿ. ನಮ್ಮ ಕಂಪನಿಯ ವಾರ್ಷಿಕ ಲೆಕ್ಕಪರಿಶೋಧನೆಯಲ್ಲಿ ಮೇಲೆ ಹೇಳಿದ ಎಲ್ಲಾ ವಿಚಾರಗಳನ್ನು ಹೇಳಬೇಕು ಎಂದರೆ ಸರಿ . 2016-17 ನೇ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿ ನನಗೆ ಅಧಿಕಾರ ಪತ್ರ ನೀಡಿದ ಒಟ್ಟು 22 ಪ್ರಕರಣಗಳಲ್ಲಿ ಒಟ್ಟು ಎಷ್ಟು ಬಾಕಿ ಇದೆ ಎಂದು ಕಾಣಿಸಿದ್ದೀರಿ ಎಂದರೆ ನೆನಪಿಲ್ಲ.

ನಮ್ಮ ಸಂಸ್ಥೆಯ ವಸ್ತುಗಳನ್ನು ಕಳುಹಿಸಿಕೊಡಬೇಕು ಹಾಗೂ ಆ ಬಗ್ಗೆ ಎಷ್ಟು ಹಣ ಬಂದಿದೆ ಮತ್ತು ಬರಬೇಕಾದ ಹಣ ಎಷ್ಟು ಎಂಬ ಬಗ್ಗೆ ಲೆಕ್ಕ ಪತ್ರ ಇಡುವುದು ನನ್ನ ಕೆಲಸವಾಗಿದೆ. ನಮ್ಮ ಸಂಸ್ಥೆಯಲ್ಲಿ ಒಂದು ವರ್ಷದಲ್ಲಿ ಎಷ್ಟು ಪ್ರಮಾಣದಲ್ಲಿ ವಸ್ತುಗಳು ತಯಾರಾಗಿವೆ ಮತ್ತು ಮಾರಾಟವಾಗಿದೆ ಮತ್ತು ಉಳಿಕೆ ಎಷ್ಟು ಎಂಬ ಬಗ್ಗೆ ದಾಖಲೆಗಳಿವೆ. ಡೀಲರ್ ಶಿಪ್ ತೆಗೆದುಕೊಂಡವರು ತಮಗೆ ಎಷ್ಟು ಪ್ರಮಾಣದ ವಸ್ತುವಿನ ಅಗತ್ಯ ಇದೆ ಎಂಬ ಬಗ್ಗೆ ಆರ್ಡರ್ ಹಾಕುತ್ತಾರೆ ಎಂದರೆ ಸರಿ . ಆ ಬಗ್ಗೆ ನಮ್ಮಲ್ಲಿ ದಾಖಲೆ ಇರುತ್ತದೆ ಎಂದರೆ ಸರಿ . ವಸ್ತುಗಳು ಕಡಿಮೆ

ಇದ್ದರೆ ಸಾರಿಗೆ ಸಂಪರ್ಕವನ್ನು ಉಪಯೋಗಿಸುತ್ತೇವೆ, ಹೆಚ್ಚಿದ್ದರೆ ಪ್ರತ್ಯೇಕ ವಾಹನದ ಮೂಲಕ ಕಳುಹಿಸಿ ಕೊಡುತ್ತೇವೆ. ಡೀಲರ್ ಶಿಪ್ ನವರು ಹಾಕಿರುವ ಆರ್ಡರ್ ನಷ್ಟೇ ಕಳುಹಿಸುತ್ತೀರಾ, ಹೆಚ್ಚು ಕಳುಹಿಸುತ್ತೀರಾ ಅಥವಾ ಕಡಿಮೆ ಕಳುಹಿಸುತ್ತೀರಾ ಎಂದರೆ ಎಷ್ಟು ಲಭ್ಯವಿದೆ ಅಷ್ಟು ಪ್ರಮಾಣದ ವಸ್ತುಗಳನ್ನು ಕಳುಹಿಸುತ್ತೇವೆ. ಗುಣಮಟ್ಟದ ಪರೀಕ್ಷೆ ಮಾಡಿದ ಬಗ್ಗೆ ನಮ್ಮ ವಸ್ತುಗಳಲ್ಲಿ ದಾಖಲೆ ಇರುತ್ತದೆ. ಗುಣಮಟ್ಟದ ಪರೀಕ್ಷೆಯನ್ನು ಪ್ರಯೋಗಾಲಯದಲ್ಲಿ ಮಾಲೀಕರು ಮಾಡಿಸುತ್ತಾರೆ. ಆ ಬಗ್ಗೆ ವಸ್ತುವಿನ ಬ್ಯಾಗಿನಲ್ಲಿ ಹಾಕುತ್ತೀರಾ ಎಂದರೆ ಹಾಕುತ್ತೇವೆ. ಗುಣಮಟ್ಟದಲ್ಲಿ ದೋಷ ಇದೆ ಎಂಬ ಬಗ್ಗೆ ಡೀಲರ್ ಶಿಪ್ ಹೊಂದಿದವರು ದೂರು ಕೊಟ್ಟಿದ್ದಾರೆಯೇ ಎಂದರೆ ನಾನು ಬಂದ ನಂತರ ಅಂತಹ ದೂರು ಕೊಟ್ಟಿಲ್ಲ. ನನಗೂ ಪೂರ್ವದಲ್ಲಿ ಅಂತಹ ದೂರು ಕೊಟ್ಟ ಬಗ್ಗೆ ಗೊತ್ತಿಲ್ಲ. ಅಂತಹ ದೂರು ಬಂದಲ್ಲಿ ನಮ್ಮ ಸಂಸ್ಥೆಯಿಂದ ಪರಿಹಾರ ಕೊಡಲಾಗುತ್ತದೆ ಅಥವಾ ಸರಕನ್ನು ಬದಲಾಯಿಸಿಕೊಡಲಾಗುತ್ತದೆ. ಈ ಷರತ್ತನ್ನು ಡೀಲರ್ ನೊಂದಿಗೆ ಮಾಡಿಕೊಂಡ ಒಪ್ಪಂದ ಪತ್ರದಲ್ಲಿ ಕಾಣಿಸಲಾಗುತ್ತದೆ.

ಆರೋಪಿಯೊಂದಿಗೆ ನಮ್ಮ ಸಂಸ್ಥೆ 2014 ರಲ್ಲಿ ಒಪ್ಪಂದ ಮಾಡಿಕೊಂಡಿರಬಹುದು, ನಿಖರವಾಗಿ ಯಾವಾಗ ಎಂದು ನೆನಪಿಲ್ಲ. ಆರೋಪಿಯೊಂದಿಗೆ ಮಾಡಿಕೊಂಡ ಒಪ್ಪಂದ ಹಾಗೂ ಹಣಕಾಸಿನ ವ್ಯವಹಾರದ ಬಗ್ಗೆ ನಮ್ಮಲ್ಲಿ ದಾಖಲೆ ಇದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಅಭ್ಯಂತರ ಇಲ್ಲ. ಆರೋಪಿ ಯಾವಾಗ ಆರೋಪಿ ನೀಡುತ್ತಾರೆ ಆ ಪ್ರಕಾರ ನಾವು ಸರಕು ಸರಬರಾಜು ಮಾಡುತ್ತೇವೆ. ಡೀಲರ್ ಶಿಪ್ ಕೊಡುವಾಗ ಸದರಿ ವ್ಯಕ್ತಿ ಸಾಮರ್ಥ್ಯ ಹೊಂದಿದ್ದಾರೆಯೇ ಇಲ್ಲವೇ ಎಂದು ನೋಡುತ್ತೇವೆ ಹಾಗೂ ಅಂಗಡಿಗೆ ಸಂಬಂಧಿಸಿದ ಹಾಗೂ ಪರವಾನಿಗೆಯ ದಾಖಲೆಗಳನ್ನು ಪಡೆಯುತ್ತೇವೆ. ನಮ್ಮ ಡೀಲರ್ ಶಿಪ್ ಅನ್ನು 50 ಕಿ.ಮೀ. ವ್ಯಾಪ್ತಿಯಲ್ಲಿ ಒಬ್ಬರಂತೆ ನೀಡುತ್ತೇವೆ. ಆರೋಪಿಗೆ ಸಂಬಂಧಿಸಿದ ಡೀಲರ್ ಶಿಪ್ ಬಗ್ಗೆ ಅಂಗಡಿಯನ್ನು ನೋಡಿರುವುದು ಮತ್ತು ದಾಖಲೆಗಳನ್ನು ಪರಿಶೀಲಿಸಿರುವುದು ನಮ್ಮಸಿಬ್ಬಂದಿ ಈಶ್ವರ್. ಅವರು ನಮ್ಮಲ್ಲಿ ಸೇಲ್ಸ್ ಆಫೀಸರ್ ಆಗಿ ಕೆಲಸ ಮಾಡುತ್ತಿದ್ದರು, ಈಗ ಕೆಲಸ ಬಿಟ್ಟಿದ್ದಾರೆ. ನಾನು ಬರುವ ಮುಂಚೆಯೇ ಅವರು ಕೆಲಸ ಬಿಟ್ಟಿದ್ದಾರೆ. ಯಾವ ಕಾರಣಕ್ಕಾಗಿ ಕೆಲಸ ಬಿಟ್ಟಿದ್ದಾರೆಂದು ಗೊತ್ತಿಲ್ಲ. ಆರೋಪಿ ಮಾಡಿಕೊಂಡ ಕರಾರಿಗೆ ಸಿಬ್ಬಂದಿಗಳು ಸಹಿ ಹಾಕಿಲ್ಲ, ಮಾಲೀಕರು ಮಾತ್ರ ಹಾಕಿದ್ದಾರೆ.

(ಮುಂದುವರಿದ ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

ಸಹಿ/-

(ಅನಿತ)

**ಹಿರಿಯ ಸಿವಿಲ್ ನ್ಯಾಯಾಧೀಶರು: ನ.ರಾ.ಪುರ.**

**ಸಾಕ್ಷಿದಾರರ ಸಹಿ:**